JANUARY 24, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಪ್ರಧಾನಮಂತ್ರಿ ಆವಾಸ್ ಯೋಜನೆ:** 42 ಸಾವಿರದ 345 ಮನೆ, ಹುಬ್ಬಳ್ಳಿಯಲ್ಲಿಂದು, ಫಲಾನುಭವಿಗಳಿಗೆ ಹಕ್ಕುಪತ್ರದ ಮೂಲಕ ಹಸ್ತಾಂತರ.

**2026ನೇ ಸಾಲಿನ, "ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ"ಗೆ,** ಮಾಲತಿ ಪಟ್ಟಣಶೆಟ್ಟಿ ಹಾಗೂ ಸತೀಶ ಕುಲಕರ್ಣಿ ಭಾಜನ.

**ಕೃಷಿ ನವೋದ್ಯಮ ಯೋಜನೆ:** ಕೃಷಿಕ್ ಅಗ್ರಿ ಬ್ಯುಸಿನೆಸ್ ಇನ್‌ಕ್ಯುಬೇಟರ್, 1 ಕೋಟಿ 26 ಲಕ್ಷ 50 ಸಾವಿರ ರೂಪಾಯಿ, ಸಹಾಯ ಧನ, ಮಂಜೂರು.

**ಹೆಣ್ಣು ಮಗುವಿನ ರಾಷ್ಟ್ರೀಯ ದಿನಾಚರಣೆ,** ಇಂದು.

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ಆವಾಸ್** ಯೋಜನೆಯಡಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಹಾವೇರಿ, ಗದಗ ಹಾಗೂ ಕೊಪ್ಪಳ ಜಿಲ್ಲೆಗಳ, ಅರ್ಹ, ಬಡ ಕುಟುಂಬಗಳಿಗೆ, 42 ಸಾವಿರದ 345 ಮನೆಗಳನ್ನು ಇಂದು, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಮಂಟೂರು ರಸ್ತೆಯ ಪಕ್ಕ ಆಯೋಜಿತ, ಬೃಹತ್ ಸಮಾವೇಶದಲ್ಲಿ, ಗಣ್ಯರು ಹಸ್ತಾಂತರಿಸಲಿದ್ದಾರೆ. ಕೊಳೆಗೇರಿ ಅಭಿವೃದ್ಧಿ ಮಂಡಳಿ ಸಂಘಟಿಸಿದ ಕಾರ್ಯಕ್ರಮದಲ್ಲಿ, ಇಂದು ಬೆಳಗ್ಗೆ 11 ಗಂಟೆಗೆ, ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ವಸತಿ ಖಾತೆ ಸಚಿವ ಜಮೀರ ಅಹಮದ್ ಖಾನ್, ಸಚಿವರುಗಳಾದ ಸತೀಶ ಜಾರಕಿಹೊಳಿ, ಎಚ್.ಸಿ. ಮಹದೇವಪ್ಪ, ಎಚ್.ಕೆ. ಪಾಟೀಲ, ಕೆ.ಎಚ್. ಮುನಿಯಪ್ಪ ಸೇರಿದಂತೆ, ಎರಡೂವರೆ ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆ. ಕೊಳೆಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಪ್ರಸಾದ ಅಬ್ಬಯ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಂಸದ ಪ್ರೊಫೆಸರ್ ಐ.ಜಿ. ಸನದಿ ಸೇರಿದಂತೆ, ವಿಶೇಷ ಆಹ್ವಾನಿತ ಗಣ್ಯರು ಮನೆಗಳ ಹಂಚಿಕೆ ಮತ್ತು ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ, ಪಾಲ್ಗೊಳ್ಳಲಿದ್ದಾರೆ. ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಎನ್.ಶಶಿಕುಮಾರ ನೇತೃತ್ವದಲ್ಲಿ, 2 ಸಾವಿರದ 500 ಸಿಬ್ಬಂದಿ, ರಕ್ಷಣೆಗಾಗಿ, ನಿಯೋಜಿತರಾಗಿದ್ದಾರೆ.

<><><>

**ರಾಜ್ಯಪಾಲರ ಭಾಷಣದ, ವಂದನಾ ನಿರ್ಣಯದ ಮೇಲೆ,** ವಿಧಾನಸಭೆಯಲ್ಲಿ ಮಾತನಾಡಲು, ಎ.ಎಸ್. ಪೊನ್ನಣ್ಣ ಅವರಿಗೆ, ಸಭಾಧ್ಯಕ್ಷ ಯು.ಟಿ. ಖಾದರ್ ಅವಕಾಶ ನೀಡುತ್ತಿದ್ದಂತೆ, ವಿಪಕ್ಷ ನಾಯಕ ಆರ್. ಅಶೋಕ ಆಕ್ಷೇಪಿಸಿದರು. ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪದ ಬಗ್ಗೆ ಪ್ರಸ್ತಾಪಿಸಿ, ಅಬಕಾರಿ ಖಾತೆ ಸಚಿವ ಆರ್.ಬಿ.ತಿಮ್ಮಾಪೂರ ಅವರ ರಾಜಿನಾಮೆಯನ್ನು, ಮುಖ್ಯಮಂತ್ರಿಯವರು, ನೈತಿಕತೆ ಹೊಣೆ ಹಿನ್ನೆಲೆ, ಪಡೆಯಬೇಕು ಎಂದು, ಪಟ್ಟು ಹಿಡಿದರು. ಈ ವಿ ‘ಯದ ಚರ್ಚೆಗೆ, ನಿಲುವಳಿ ಸೂಚನೆಯಡಿ, ಅವಕಾಶ ಕಲ್ಪಿಸುವಂತೆ, ಸಭಾಧ್ಯಕ್ಷರನ್ನು ಆಗ್ರಹಿಸಿದರು. ಚರ್ಚೆಗೆ ಸಂಬಂಧಿಸಿ, ನಿಯಮ 69 ರ ಅಡಿ, ಅವಕಾಶ ಕಲ್ಪಿಸಲಾಗುವುದು ಎಂದು, ಸಭಾಧ್ಯಕ್ಷರು ವಿಪಕ್ಷ ನಾಯಕರಿಗೆ, ಸ್ಪಷ್ಟ ಪಡಿಸಿದರು. ಒಪ್ಪದ ವಿಪಕ್ಷಗಳು, ಧರಣಿ ಆರಂಭಿಸಿದ ಹಿನ್ನೆಲೆ, ಸಭಾಧ್ಯಕ್ಷರು, ಅನಿವಾರ್ಯವಾಗಿ, ಕಲಾಪವನ್ನು 27ನೇ ತಾರೀಖು, ಮಂಗಳವಾರ ಬೆಳಗ್ಗೆ 10 ಗಂಟೆಗೆ, ಮರು ಸಮಾವೇಶಗೊಳ್ಳುವುದು ಎಂದು, ಪ್ರಕಟಿಸಿ, ಮುಂದೂಡಿದರು.

<><><>

**ಮೇಲ್ಮನೆ, ವಿಧಾನ ಪರಿಷತ್ತಿನಲ್ಲಿ,** ಸಭಾಪತಿ ಬಸವರಾಜ ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ, ಸದನ ಸಮಾವೇಶ ಗೊಳ್ಳುತ್ತಿದ್ದಂತೆ, ವಿಧಾನಮಂಡಲ ಅಧಿವೇಶನವನ್ನು ಉದ್ದೇಶಿಸಿ, ಭಾಷಣ ಮಾಡಲು ಆಗಮಿಸಿದ್ದ, ರಾಜ್ಯಪಾಲರಿಗೆ ಆಡಳಿತ ಪಕ್ಷದ ಶಾಸಕರು ಅವಮಾನ ಮಾಡಿದ್ದಾರೆ; ರಾಷ್ಟ್ರಗೀತೆಗೂ ಅಗೌರವ ಸೂಚಿಸಿದ್ದಾರೆ ಎಂದು ಆರೋಪಿಸಿ, ವಿಪಕ್ಷಗಳು ಚರ್ಚೆಗೆ ಪಟ್ಟು ಹಿಡಿದವು. ಆಡಳಿತ ಪಕ್ಷದವರು ಸಹ, ನಿಗದಿತ ವೇಳಾ ಪಟ್ಟಿಯಂತೆ, ವಿಷಯಗಳ ಚರ್ಚೆಗೆ ಆಗ್ರಹಿಸಿದರು. ಈ ಸಂಬಂಧ ಆಡಳಿತ ಪಕ್ಷ ಹಾಗೂ ವಿಪಕ್ಷದ ಸದಸ್ಯರ ನಡುವೆ, ಮಾತಿನ ಚಕಮಕಿ ನಡೆಯಿತು. ಶಾಸಕ, ಬಿ.ಕೆ.ಹರಿಪ್ರಸಾದ ಅವರನ್ನು, ಸದನದಿಂದ ಅಮಾನತು ಮಾಡಲೇಬೇಕೆಂದು ಬಿಜೆಪಿ ಸದಸ್ಯರು, ಸಭಾಪತಿಗಳಲ್ಲಿ ಪಟ್ಟು ಹಿಡಿದರು. ಸದನವನ್ನು ಮಂಗಳವಾರಕ್ಕೆ ಮುಂದೂಡಲಾಯಿತು.

<><><>

**ಧಾರವಾಡದ, ಡಾಕ್ಟರ್ ದ.ರಾ.ಬೇಂದ್ರೆ** ರಾಷ್ಟ್ರೀಯ ಸ್ಮಾರಕ ಟ್ರಸ್ಟ್, 2026ನೇ ಸಾಲಿನ, "ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ"ಗೆ, ಧಾರವಾಡದ ಹಿರಿಯ ಸಾಹಿತಿ ಮಾಲತಿ ಪಟ್ಟಣಶೆಟ್ಟಿ ಹಾಗೂ ಹಾವೇರಿಯ ಹಿರಿಯ ಸಾಹಿತಿ ಸತೀಶ ಕುಲಕರ್ಣಿ ಅವರಿಗೆ, ಪ್ರದಾನ ಮಾಡಿ ಗೌರವಿಸಲಿದೆ ಎಂದು, ಟ್ರಸ್ಟ್ ಅಧ್ಯಕ್ಷ ಸರಜೂ ಕಾಟಕರ ತಿಳಿಸಿದ್ದಾರೆ. ಧಾರವಾಡದ ಸಾಧನಕೇರಿಯ, ಬೇಂದ್ರೆ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ವರಕವಿ ದ.ರಾ.ಬೇಂದ್ರೆ ಅವರ, 130ನೇ ಜನ್ಮ ದಿನವಾದ, ಈ ತಿಂಗಳ 31 ರಂದು, ಸಾಧನಕೇರಿಯ, ದ.ರಾ.ಬೇಂದ್ರೆ ಭವನದಲ್ಲಿ ರಾಷ್ಟ್ರೀಯ ಪುರಸ್ಕಾರಗಳನ್ನು ಪ್ರದಾನ ಮಾಡಲಾಗುವುದು ಎಂದರು. ಖ್ಯಾತ ಸಾಹಿತಿ, ಬೆಂಗಳೂರಿನ, ಎಸ್.ಜಿ.ಸಿದ್ಧರಾಮಯ್ಯ ಅವರು, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿ ತಲಾ ಐವತ್ತು ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ನಾಕು ತಂತಿ ಕವನ ಸಂಕಲನಕ್ಕೆ, ಜ್ಞಾನಪೀಠ ಪುರಸ್ಕಾರ ಸಂದು, 50 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ನಾಲ್ಕು ಕಡೆಗಳಲ್ಲಿ ವಿಶೇಷ ವಿಚಾರ ಸಂಕಿರಣ, ಯುವ ಕವಿ ಪುರಸ್ಕಾರ ಹಾಗೂ, ಜನವರಿ 31 ನ್ನು ಕವಿ ದಿನವಾಗಿ ಘೋಷಿಸಲು, ಧಾರವಾಡದ, ಡಾಕ್ಟರ್ ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿದೆ.

<><><>

**ಕೇಂದ್ರ ಪುರಸ್ಕೃತ, ಕೃಷಿ ನವೋದ್ಯಮ ಯೋಜನೆ ಅಡಿ,** ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ ಆರಂಭಿಸಲಾದ, ಕೃಷಿಕ್ ಅಗ್ರಿ ಬ್ಯುಸಿನೆಸ್ ಇನ್‌ಕ್ಯುಬೇಟರ್, ಆರ್.ಕೆ.ವಿ.ವೈ ಇನ್ನೊವೇ ‘ನ್ ಹಾಗೂ ಕೃಷಿ ಉದ್ಯಮಶೀಲತೆ ಯೋಜನೆಯಡಿ, 25 ಕೃಷಿ ನವೋದ್ಯಮಿಗಳಿಗೆ, ಮೊದಲ ಹಂತದ ಸಹಾಯ ಧನ, 1 ಕೋಟಿ 26 ಲಕ್ಷ 50 ಸಾವಿರ ರೂಪಾಯಿ, ಮಂಜೂರು ಮಾಡಲಾಗಿದೆ. ಕೃಷಿ ವಿಶ್ವವಿದ್ಯಾಲಯದ, ಶಿಕ್ಷಣ ನಿರ್ದೇಶಕ ಬಿ.ಡಿ. ಬಿರಾದಾರ, ಸಮಾರಂಭದಲ್ಲಿ, ಕೃಷಿಕ್ ನವೋದ್ಯಮಿಗಳನ್ನು ಉದ್ದೇಶಿಸಿ

ಮಾತನಾಡಿ, ಕೃಷಿ ತಂತ್ರಜ್ಞಾನ, ಯಂತ್ರಜ್ಞಾನ ರೈತಪರ ಹಾಗೂ ಕೃಷಿಕ ಸ್ನೇಹಿಯಾಗಿರುವಂತೆ, ಸರಳವಾಗಿ ರೂಪಿಸಲು ಸೂಚಿಸಿದರು. ಹನ್ನೊಂದನೇ ತಂಡದ, ಕೃಷಿಕ್ ನವೋದ್ಯಮಿಗಳೊಂದಿಗೆ ಒಪ್ಪಂದದ ಒಡಂಬಡಿಕೆಯ ಪತ್ರಕ್ಕೆ, ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು, ಸಹಿ ಹಾಕಿದರು.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ರಾಷ್ಟ್ರೀಯ ಹೆಣ್ಣು** ಮಕ್ಕಳ ದಿನಾಚರಣೆ, ಇಂದು. ಪ್ರತಿಯೊಂದು ಹೆಣ್ಣು ಮಗುವಿನ, ಘನತೆ, ಕನಸು ಹಾಗೂ ಭವಿಷ್ಯಕ್ಕೆ ಸಮಾಜ ಚಿಂತಿಸಬೇಕಾದ, ದಿನವಾಗಿ ಆಚರಿಸಲಾಗುತ್ತದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ಮಹತ್ವಾಕಾಂಕ್ಷೆಯ, 'ಬೇಟಿ ಬಚಾವೋ, ಬೇಟಿ ಪಢಾವೋ' ಯೋಜನೆ, ಹೆಣ್ಣು ಮಕ್ಕಳ ಶಿಕ್ಷಣ, ಬದುಕು, ಆರ್ಥಿಕ ಸ್ವಾವಲಂಬನೆ, ಪೋಷಣೆ ಹಾಗೂ ರಾಷ್ಟ್ರ ಗೌರವದ ಪ್ರತೀಕವಾಗಿ, ಕಾಣಲು ಮತ್ತು ರೂಪಿಸಲು, ಬದ್ಧವಾಗಿದೆ.

<><><>

**ಸಂಗೀತ ಶಾಸ್ತ್ರಜ್ಞ, ಭಾರತೀಯ ಶಾಸ್ತ್ರ ಪಂಡಿತ,** ಪದ್ಮಶ್ರೀ ಪುರಸ್ಕೃತ, ಮಹಾ ಮಹೋಪಾಧ್ಯಾಯ ರಾ.ಸತ್ಯನಾರಾಯಣ ಅವರ ಶತಮಾನೋತ್ಸವ ವರ್ಷ, 2026–27. ತನ್ನಿಮಿತ್ತ, ಬ್ರಹ್ಮವಿದ್ಯಾ ಪ್ರತಿಷ್ಠಾನ ಹಾಗೂ ಡಿವಿಜಿ ಬಳಗ ಪ್ರತಿಷ್ಠಾನ, ಇಂದು ಸಂಜೆ 5.30ಕ್ಕೆ, ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ, ಬಿ.ಎಸ್.ಎಸ್ ವಿದ್ಯೋದಯ ಸಂಸ್ಥೆಯಲ್ಲಿ, ಶತಮಾನ ರಾಸ ಎಂಬ, ವಿಶಿಷ್ಟ ಕಾರ್ಯಕ್ರಮ ಆಯೋಜಿಸಿದೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು, ಮಾಹಿತಿ ನೀಡಿದ್ದಾರೆ, ಡಿವಿಜಿ ಬಳಗದ ಸಂಚಾಲಕ, ಮೈಸೂರಿನ ಸಿ. ಕನಕರಾಜು.

<><><>

**ಕನಕರಾಜು ಧ್ವನಿ 30 ಸೆಕೆಂದುಗಳು**

<><><>

**ಶಿವಮೊಗ್ಗ ಜಿಲ್ಲೆ, ಭದ್ರಾವತಿಯ** ತರಬಾಳುವಿನಲ್ಲಿ, ಇಂದು ಸಂಜೆ 6.30 ಕ್ಕೆ ತರಳಬಾಳು ಹುಣ್ಣಿಮೆ ಮಹೋತ್ಸವ, ವಿಜೃಂಭಣೆಯಿಂದ ಜರುಗಲಿದೆ. ಶ್ರೀ ಕ್ಷೇತ್ರ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಉಡುಪಿಯ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು, ಸಾನಿಧ್ಯ ವಹಿಸಿ, ಆಶೀರ್ವಚನ ನೀಡಲಿದ್ದಾರೆ. ತರಳಬಾಳು ಹುಣ್ಣಿಮೆ ಮಹೋತ್ಸವದ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಶ್ರೀ ಮಠದ ಕಾರ್ಯದರ್ಶಿ ಎಚ್.ಆರ್ ಬಸವರಾಜಪ್ಪ.

<><><>

**ಹೆಚ್.ಆರ್ ಬಸವರಾಜಪ್ಪ ಧ್ವನಿ 45 ಸೆಕೆಂದುಗಳು**

<><><>

**'ಪಶ್ಚಿಮ ಘಟ್ಟಗಳು, ಮಾಧವ ಗಾಡ್ಗೀಳ್ ಹಾಗೂ** ನಮ್ಮ ನಡೆ' ವಿಚಾರ ಸಂಕಿರಣವನ್ನು, ಧಾರವಾಡದ, ಪರಿಸರಕ್ಕಾಗಿ ನಾವು ಸಂಘಟನೆ, ಇಂದು, ಬೆಳಗ್ಗೆ 10.30ಕ್ಕೆ, ಕರ್ನಾಟಕ ವಿದ್ಯಾವರ್ಧಕ ಸಂಘದ ರಾ.ಹ ದೇಶಪಾಂಡೆ ಸಭಾಭವನದಲ್ಲಿ, ಆಯೋಜಿಸಿದೆ. ಪರಿಸರಕ್ಕಾಗಿ ನಾವು ಸಂಘಟನೆಯ ರಾಜ್ಯಾಧ್ಯಕ್ಷ ಎ.ಟಿ ರಾಮಸ್ವಾಮಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹೆಸರಾಂತ ಜೀವಿ ಪರಿಸರ ತಜ್ಞ, ಶಿರಸಿಯ ಕೇಶವ ಹೆಗಡೆ ಕೊರ್ಸೆ, ಮುಖ್ಯ ಅತಿಥಿಯಾಗಿ, ಪಾಲ್ಗೊಳ್ಳಲಿದ್ದಾರೆ.

<><><>

**ಧಾರವಾಡದ, ಸ್ವರಸೇನ ಪಂಡಿತ** ಸಂಗಮೇಶ್ವರ ಗುರವ ಸಂಗೀತ ಪ್ರತಿಷ್ಠಾನದ ಉದ್ಘಾಟನೆ ಹಾಗೂ ಸಂಗೀತೋತ್ಸವ ಇಂದು ಸಂಜೆ 5 ಗಂಟೆಗೆ, ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜರುಗಲಿದೆ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಅಧ್ಯಕ್ಷ, ಪದ್ಮಶ್ರೀ ಪಂಡಿತ ಎಂ. ವೆಂಕಟೇಶ ಕುಮಾರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಾನಿಧ್ಯ ವಹಿಸಲಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಪ್ರಧಾನಮಂತ್ರಿ ಆವಾಸ್** ಯೋಜನೆ: 42 ಸಾವಿರದ 345 ಮನೆ, ಹುಬ್ಬಳ್ಳಿಯಲ್ಲಿಂದು, ಫಲಾನುಭವಿಗಳಿಗೆ ಹಕ್ಕುಪತ್ರದ ಮೂಲಕ ಹಸ್ತಾಂತರ.

**2026ನೇ ಸಾಲಿನ, "ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ"ಗೆ,** ಮಾಲತಿ ಪಟ್ಟಣಶೆಟ್ಟಿ ಹಾಗೂ ಸತೀಶ ಕುಲಕರ್ಣಿ ಭಾಜನ.

**ಕೃಷಿ ನವೋದ್ಯಮ ಯೋಜನೆ:** ಕೃಷಿಕ್ ಅಗ್ರಿ ಬ್ಯುಸಿನೆಸ್ ಇನ್‌ಕ್ಯುಬೇಟರ್, 1 ಕೋಟಿ 26 ಲಕ್ಷ 50 ಸಾವಿರ ರೂಪಾಯಿ, ಸಹಾಯ ಧನ, ಮಂಜೂರು.

**ಹೆಣ್ಣು ಮಗುವಿನ ರಾಷ್ಟ್ರೀಯ** ದಿನಾಚರಣೆ, ಇಂದು.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>